ಶ್ರೀ ವೈ.ಎನ್. ರುದ್ರೇಶ್‌ಗೌಡ:– 7 ವರ್ಷಗಳಲ್ಲಿ ಏನೂ ಮಾಡದಿರುವುದನ್ನು ಒಂದೇ ಸಲ ಒಂದೇ ಸೂರಿನಡಿ ಎಲ್ಲಿ ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು:– ದಯವಿಟ್ಟು ಸಾಕು. ಉತ್ತರ ಚೆನ್ನಾಗಿ ಹೇಳಿದ್ದಾರೆ.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ

23(572); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬೀರನಾಳ ಗ್ರಾಮ ಹಾಗೂ ಕೆಂಪಟ್ಟಿ ಗ್ರಾಮಗಳ ಕುಡಿಯುವ ನೀರು ಪೂರೈಸಲು, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗಳ ಮಂಜೂರಾತಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು;

ಇ) ಪ್ರಸ್ತುತ ಸಾಲಿನಲ್ಲಿ ಮಂಜೂರಾತಿ ನೀಡಲಾಗುವುದೇ;

ಈ) ಮಲೀನವಾಗಿರುವ ಜೋಗುಳ ಬಾವಿಯನ್ನು ಸ್ವಚ್ಛಗೊಳಿಸಲು ಸರ್ಕಾರ ಕೂಡಲೇ ಅನುದಾನ ಬಿಡುಗಡೆಗೊಳಿಸುವುದೇ?

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ (1) ಬೀರನಾಳ ಮತ್ತು ಇತರೆ 13 ಗ್ರಾಮಗಳು ಮತ್ತು (2) ಕೆಂಪಟ್ಟಿ ಮತ್ತು ಇತರೆ 3 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳ ಪ್ರಾಥಮಿಕ ಯೋಜನಾ ವರದಿ (PSR) PSRನ್ನು ತಯಾರಿಸಲು ಅನುಮೋದನೆಯಾಗಿದೆ. ಸದರಿ ರಾಜ್ಯ ತಾಂತ್ರಿಕ ಸಂಸ್ಥೆ ಮತ್ತು ರಾಜ್ಯಮಟ್ಟದ ಯೋಜನೆಗಳ ಅನುಮೋದನೆ ಸಮಿತಿಯಲ್ಲಿ

ಮಂಡಿಸಿ ಆರ್ಥಿಕ ಮತ್ತು ತಾಂತ್ರಿಕ ಸಿಂಧುತ್ವಗಳ ಹಿನ್ನೆಲೆಯಲ್ಲಿ ಅನುಮೋದನೆ ಪಡೆಯಬೇಕಾಗಿದೆ.

ಆ) **ಮತ್ತು** ಇ) ಸದರಿ ಯೋಜನಾ ಕಾಮಗಾರಿಗಳ ಪ್ರಾಥಮಿಕ ಯೋಜನಾ ವರದಿಯನ್ನು ರಾಜ್ಯ ತಾಂತ್ರಿಕ ಸಂಸ್ಥೆ ಒಪ್ಪಿದ ಬಳಿಕ ರಾಜ್ಯಮಟ್ಟದ ಯೋಜನೆಗಳ ಮಂಜೂರಾತಿ ಸಮಿತಿಯ ಅನುಮೋದನೆಗಾಗಿ ಪ್ರಸ್ತಾಪ ಮಂಡಿಸಬೇಕಾಗಿದೆ.

ಈ) ಈ ಸಂಬಂಧ ಜಾಗ್ರತೆಯಾಗಿ ಪರಿಶೀಲಿಸಿ ಜೋಗುಳ ಬಾವಿಗಳನ್ನು ಸ್ವಚ್ಛಗೊಳಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಈಗಾಗಲೇ ಬೆಳಗಾವಿ ಜಿಲ್ಲಾ ಪಂಚಾಯತಿಗೆ ನಿರ್ದೇಶನ ನೀಡಲಾಗಿದೆ.

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬೀರನಾಳ ಹಾಗೂ 13 ಗ್ರಾಮಗಳು ಮತ್ತು ಕೆಂಪಟ್ಟಿ ಹಾಗೂ ಇತರ ಮೂರು ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ, PSR ತಯಾರಿಸಿ ಅನುಮೋದನೆಗಾಗಿ ಈಗಾಗಲೇ 6 ತಿಂಗಳು ಆಗಿದೆ.

ಅಧ್ಯಕ್ಷರು:– ಏನು ಮಾಡಬೇಕೆಂದು ಕೇಳಿ.

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ:– ಪ್ರತಿ ವರ್ಷ ಕುಡಿಯುವ ನೀರಿಗೆ ಟ್ಯಾಂಕರ್ ಮೂಲಕ ನೀರು ಒದಗಿಸಿ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತದೆ.

ಅಧ್ಯಕ್ಷರು:– ಇವೆಲ್ಲ ಅನುಮೋದನೆಯಾಗಿದೆ. ತಾಂತ್ರಿಕ ಸಂಸ್ಥೆ ಮತ್ತು ರಾಜ್ಯಮಟ್ಟದ ಯೋಜನೆಗಳ ಅನುಮೋದನೆ ಸಮಿತಿಯಲ್ಲಿ ಮಂಡಿಸಿ ಆರ್ಥಿಕ ಮತ್ತು ತಾಂತ್ರಿಕ ಸಿಂಧುತ್ವಗಳ ಹಿನ್ನೆಲೆಯಲ್ಲಿ ಅನುಮೋದನೆ ಪಡೆಯಬೇಕಾಗಿದೆ ಎಂದು ಇದೆ. ಅದನ್ನು ಬೇಗ ಮಾಡಿರಿ ಎಂದು ಹೇಳಿ.

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ:– ಆ ಕುಡಿಯುವ ನೀರಿನ ವ್ಯವಸ್ಥೆಯನ್ನು ಬೇಗನೇ ಮಾಡಬೇಕು. ಆದರೆ, ಕುಡಿಯುವ ನೀರಿಗೋಸ್ಕರ ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಕಳೆದ ವರ್ಷ ಒಬ್ಬರು ತಹಶೀಲ್ದಾರ್, ಇಬ್ಬರು RI ಮತ್ತು 6 ಮಂದಿ ದಲಾಯತ್‌ಗಳು ಕುಡಿಯುವ ನೀರಿನ ಅವ್ಯವಹಾರದಲ್ಲಿ suspend ಆಗಿದ್ದಾರೆ. ಈಗ ತಹಶೀಲ್ದಾರ್ ಸದ್ಯಕ್ಕೆ ಅಲ್ಲಿ ಇಲ್ಲ.

ಅಧ್ಯಕ್ಷರು:– ಅವೆಲ್ಲ ಬೇಡ. ಈಗ ಇದನ್ನು ಆದಷ್ಟು ಬೇಗ ಪೂರೈಸಬೇಕು. ದಯವಿಟ್ಟು ಬೇಗ ಮಾಡಿ ಎಂದು ಹೇಳಿ.

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ:– ಆದಷ್ಟು ಬೇಗನೆ ಇದನ್ನು ಕುಡಿಯುವ ನೀರಿಗೆ ಸಂಬಂಧಿಸಿದಂತೆ ಮಂಜೂರಾತಿ ಮಾಡಬೇಕೆಂದು ಸಂಬಂಧಪಟ್ಟ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಖಂಡಿತ.

ಶ್ರೀ ಹೆಚ್.ಕೆ. ಪಾಟೀಲ್:– ಮಂಜೂರಾತಿ ವಿಚಾರದಲ್ಲಿ ಬೇಗ ಕೊಡುತ್ತೇವೆ. ಅದಲ್ಲದೆ ಈಗಾಗಲೇ ಪಂಚಾಯಿತಿಗೆ ಏನು ನಿರ್ದೇಶನ ಕೊಟ್ಟಿದ್ದೇವೆ, ಅದನ್ನೂ ಪ್ರಸ್ತಾಪ ಮಾಡುತ್ತೇನೆ.

(ಗೊಂದಲ)

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ:– ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕಿನ ಜೋಗುಳಬಾವಿ ಮಲಿನ ಆಗಿರುವುದನ್ನು ಸ್ವಚ್ಛ ಮಾಡಲಿಕ್ಕೆ ಜಿಲ್ಲಾಪಂಚಾಯಿತಿಯವರು ನಿರ್ದೇಶನ ಮಾಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಲಕ್ಷಾಂತರ ಜನರು ಜೋಗುಳಬಾವಿ ಭಕ್ತರು ಬರುತ್ತಾರೆ. ಶಿರಸಂಗಿ trust ನಿಂದ ಅದಕ್ಕೆ 10–12 ಕೋಟಿ ರೂಪಾಯಿಗಳ tender ಆಗಿ ವರ್ಷವಾಯಿತು, ಹಣ ಬರುತ್ತಿದೆ. DC ಯವರ ಮುಖಾಂತರ ಅದನ್ನು ಸ್ವಚ್ಛ ಮಾಡುವುದಕ್ಕೆ ಸಚಿವರು ಆದೇಶ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ, ಒತ್ತಾಯ ಮಾಡುತ್ತೇನೆ.

ಶ್ರೀ ಆನಂದ ಚಂದ್ರಶೇಖರ ಎಂ. ಮಾಮನಿ:– ಜೋಗುಳಬಾವಿ ಏನಿದೆ ಅದು ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಹೊಂದಿಕೊಂಡಂಥದ್ದು ಇದೆ. ಜೋಗುಳಬಾವಿ ಏನಿದೆ ಶಿರಸಂಗಿ trustನಲ್ಲಿರುವುದರಿಂದ ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಬರುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಅದು ಜಿಲ್ಲಾಧಿಕಾರಿಗಳ chairmanship ನಲ್ಲಿ ಶಿರಸಂಗಿ trust committee ಇದೆ. ಅದಕ್ಕೆ ಪ್ರತಿ ವರ್ಷ 12 ರಿಂದ 13 ಲಕ್ಷ ರೂಪಾಯಿ auction ಮಾಡಿ ಲಿಲಾವು ಮಾಡುತ್ತಾರೆ. ಆ ಲಿಲಾವಿನ ಹಣದಲ್ಲಿ ಅದನ್ನು clean ಮಾಡಬೇಕೆನ್ನುವಂಥದ್ದಕ್ಕೆ ಸರ್ಕಾರ ಸೂಕ್ತ ನಿರ್ದೇಶನ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರುವುದಿಲ್ಲ.

ಅಧ್ಯಕ್ಷರು:– ಹೇಳಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:– ಶಿರಸಂಗಿ ಲಿಂಗರಾಜು trustನ ಅಧ್ಯಕ್ಷರು, ಕಾರ್ಯದರ್ಶಿಗಳಾದ ಎಂ.ಬಿ. ಪಾಟೀಲರು ಇದ್ದಾರೆ. ತಾವು, ಅವರೂ ಮಾತನಾಡಿ ನಿಮ್ಮ ಕ್ಷೇತ್ರಕ್ಕೆ ಅದು ಬರುತ್ತದೆ. ಅದನ್ನು ನಾವು ಸ್ವಚ್ಛ ಮಾಡಿಸಬೇಕು, ನಾವು ಮತ್ತೇನಾದರೂ ಕೆಲಸ ಇದ್ದರೆ ಮಾಡಬೇಕು ಎಂದು ಇದ್ದರೆ ಹೇಳಿ. ಒಂದು ವೇಳೆ ಆ trust ನವರು ನಾವೇ ಮಾಡುತ್ತೇವೆಂದರೆ, ಜಿಲ್ಲಾಧಿಕಾರಿಗಳು, ನಮ್ಮ ಜಿಲ್ಲಾಪಂಚಾಯಿತಿಗಳಿಗೇನು ನಿರ್ದೇಶನ ಕೊಟ್ಟಿದ್ದೇವೆ, ಅವರು ಮಾಡುತ್ತಾರೆ. ಅವರಿಗೆ ಬೇಕೆಂದರೆ ಅನುದಾನ ಕೊಡುವುದಿದ್ದರೆ ಕೊಡೋಣ.

(ಗೊಂದಲ)

ಅಧ್ಯಕ್ಷರು:– ಏಕೆ ಬರುವುದಿಲ್ಲ ಹೇಳಿ?

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:– ಜಿಲ್ಲಾಧಿಕಾರಿಗಳು Chairman ಇದ್ದಾರೆ. ಮುಜರಾಯಿ ಇಲಾಖೆಗೆ, ಜಿಲ್ಲಾಧಿಕಾರಿಗಳಿಗೆ ಸರ್ಕಾರ ಸೂಕ್ತ ನಿರ್ದೇಶನ ಕೊಡಬೇಕು.

ಅಧ್ಯಕ್ಷರು:– ಇದು ಮುಜರಾಯಿ ಇಲಾಖೆಗೆ ಸೇರಿದ್ದಾ?

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:– ಹೌದು.

ಅಧ್ಯಕ್ಷರು:– ಹಾಗೆ ಹೇಳಿ.

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ:– ಸ್ವಚ್ಛ ಮಾಡುವ ಸಲುವಾಗಿ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡಬೇಕು.

ಅಧ್ಯಕ್ಷರು:– ಅದು ಮುಜರಾಯಿ ಇಲಾಖೆಗೆ ಸೇರಿದ್ದಂತೆ ನೋಡಿ.

ಶ್ರೀ ಹೆಚ್.ಕೆ. ಪಾಟೀಲ್:– ಮುಜರಾಯಿ ಇಲಾಖೆಗೆ ಅದು ಸೇರಿದ್ದಲ್ಲ.

ಅಧ್ಯಕ್ಷರು:– ಸರಿ ಮತ್ತೆ.

ಶ್ರೀ ಹೆಚ್.ಕೆ. ಪಾಟೀಲ್:– ಆದರೆ, ಶಿರಸಂಗಿ, ಲಿಂಗರಾಜ trust ಏನಿದೆ, ಆ trust ನ ತಾಬಾದೊಳಗೆ ಅದು ಇದೆ. ಅವರು manage ಮಾಡುತ್ತಿದ್ದರು. ಅವರು ಅದನ್ನು ಸ್ವಚ್ಛ ಮಾಡಿ ಎಲ್ಲ ಜನೋಪಯೋಗಿ ಮಾಡಿದರೆಂದರೆ ನಮ್ಮದೇನೂ ತಕರಾರಿಲ್ಲ. ಇಲ್ಲದೇ ಇದ್ದರೆ ಶಾಸಕರು, ನಾವು ಜಿಲ್ಲಾಪಂಚಾಯಿತಿಯವರು ಅದನ್ನು ಸ್ವಚ್ಛ ಮಾಡಬೇಕೆಂದು ಇದ್ದರೆ ನಾವು ಅದನ್ನು ಮಾಡುವುದಕ್ಕೆ ನಿರ್ದೇಶನ ಕೊಡುತ್ತೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಕುಡಿಯುವ ನೀರನ್ನು ಬರ ಇರುವ 34 ತಾಲ್ಲೂಕುಗಳಿಗೆ tanker ನಲ್ಲಿ ನೀರು supply ಮಾಡುತ್ತಿದ್ದರು.

ಅಧ್ಯಕ್ಷರು:– ಬೇರೆ ಕೇಳಿ. ಅದು ಅವರ ಕ್ಷೇತ್ರದ್ದು.